ತೋಳ ತನ್ನ ಪಿಚವಾಡಕ್ಕೆ ಕಚ್ಚಿ ಪಾವು ಕಿಲೋ ಮಾಂಸ ಬಗೆದ ವಿಷಯ ಯಾರಿಗೂ ಗೊತ್ತಾಗಬಾರದೆಂದು ಕಕೂನ ಹೇಳಿದ್ದ, ಭಾಷೆ ಸಹ ತಗೊಂಡಿದ್ದ, ಆದರಿಲ್ಲಿ ಏನೋ ಮಿಸ್ಸು ಹೊಡಿತಿದೆ' ಎಂದು ಯೋಚಿಸಿದ.

'ಈಯಮ್ಮನಿಗೆ ಎಲ್ಲಾ ಗೊತ್ತಿದೆ, ಕಕೂನನ ಪಿಚವಾಡಕ್ಕೆ ತೋಳ ಕಚ್ಚಿದ ಬಗ್ಗೆಯೂ ಗೊತ್ತಿದೆ, ಆದರೆ ಕಕೂನ ಮೆಲ್ಲಗೆ ಹುಷಾರುಗುತ್ತಿದ್ದಾನಲ್ವೇ, ಇನ್ನೂ ಸರಿ ಹೋಗಲಿಲ್ಲ ಎಂದರೆ ಏನರ್ಥ' ಎಂದು ತಲೆ ಕೆರೆದುಕೊಂಡ. ಇವಳು ಆ ಹುಡುಗನನ್ನು ಕಾಣುವ ತವಕದಲ್ಲಿ ಓಟಿಯ ಬಳಿ ಹೋದಳು. ಆದರೆ, ಚಾಕುಂಡನಿಗೆ ಸರಿ ಹೋಗುವ ಮಾತಿನ ಅರ್ಥ ತಿಳಿಯದೇ ಕಂಗಾಲಾದ. ಇವನು ಯೋಚಿಸುತ್ತಿದ್ದಲೇ ಇದ್ದ. 'ಅವರು ಯಾಕೆ ಸರಿ ಹೋಗಲಿಲ್ಲ ನೋಡಿ ಎಂದು ಹೇಳಿದ್ದು' ಎಂದು ಕೇಳಿದ. ಓಪಿಡಿಯ ಹುಡುಗಿಗೆ 'ಈ ಮನುಷ್ಯನಿಗೆ ಸರಿಹೋಗುವುದರ ಅರ್ಥ ಹೇಳಿದರೆ ಮುಗಿದೇ ಹೋಯಿತು, ರಂಪ ಎಬ್ಬಿಸಿಬಿಡುತ್ತಾನೆಂದು ಅನಿಸುತ್ತೆ, ತತಕ್ಷಣ ಏನು ಹೇಳಬೇಕೆಂದು ಗೊತ್ತಾಗದೆ' ಒಳಗೊಳಗೆ ನಗುತ್ತಾ 'ಅವರು ಹೀಗೆಯೇ ಎಲ್ಲರ ಬಗ್ಗೆ ವಿಚಾರಿಸ್ತಾರೆ, ಹಾಗೆ ನಿಮ್ಮವರ ಬಗ್ಗೆನೂ ಚನ್ನಾಗಿದ್ದಾರಲ್ಲ ಎಂದು ಕೇಳಿದರು ಅಷ್ಟೇ' ಹೇಳಿದಳು.

ಚಾಕುಂಡನಿಗೆ ಈ ಹುಡುಗಿಯ ಮಾತು ಜೀರ್ಣವಾಗಲಿಲ್ಲ ಎನಿಸುತ್ತೆ. ಮತ್ತೆ ತಲೆ ಕೆರೆದುಕೊಂಡ. 'ನಾನು ಇಲ್ಲಿಯೇ ನಿಂತರೆ ಇನ್ನಷ್ಟು ತಲೆ ಕೆಡುತ್ತೆ, ಪೇಟೆಯಿಂದ ತಂದ ಅಮ್ಜದ್ ಖಾನಿನ ಬಟ್ಟೆಗಾದರೂ ಬೆಲೆ ಕೊಡಬೇಕು, ಏನೇ ಆದರೂ ಕಕೂನನಿಗೆ ಕಚ್ಚಿದ ತೋಳ ಬಿಡಬಾರದು, ಆಣೆ ಬೇರೆ ಮಾಡಿದೀನಿ, ಭಯಂಕರವಾಗಿ ಶಿಕಾರಿ ಮಾಡಿ ಊರಲ್ಲೆಲ್ಲಾ ಮೆರವಣಿಗೆ ಮಾಡಿ, ಕೊನೆಗೆ ಇವನ ಮುಂದೆ ಆ ತೋಳ ತಂದಿಡಬೇಕು' ಎಂದು ತೀರ್ಮಾನಿಸಿ ಚಾಕುಂಡ ಬೈಕು ಹತ್ತಿ ಹೊರಟ.

ಒಂದೇ ರೀತಿಯ ಕಬ್ಬಿಣದ ಹಾಸಿಗೆಗಳನ್ನು ಹತ್ತಿರತ್ತಿರ ಹಾಕಿದ್ದ ಜನರಲ್ ವಾರ್ಡಿನಲ್ಲಿ ಒಂದು ಸುತ್ತು ಹಾಕಿ ಅರ್ಧದಷ್ಟು ಚಹಾ ಖಾಲಿ ಮಾಡಿಕೊಂಡು ಬೇಗ ಓಟಿಯ ಬಳಿ ಸುಳಿದಳು. ಖಾಲಿ ಸಿನಿಮಾ ಥಿಯೇಟರಿನ ಹಾಗೆ ಅಲ್ಲಿ ಹೆದರಿಸುವ ಮೌನ ತುಂಬಿಕೊಂಡಿತ್ತು. 'ನೆನ್ನೆ ಇಲ್ಲಿಯೇ ಬೆಳ್ಳಗೆ ಮೂಲಂಗಿಯ ಹಾಗೆ ಕೂತಿದ್ದನಲ್ಲ ಅವನು, ಮತ್ತೆ ಡೋನರುಗಳನ್ನು ಹುಡುಕಲು ಹೊರಟನೇ, ಎಷ್ಟು ಹೊತ್ತಿಗೆ ಬರುತ್ತಾನೆ, ನನ್ನೊಮ್ಮೆ ಕೇಳಿದ್ದರೆ ನಾನೇ ರಕ್ತ ಕೊಡುತ್ತಿದ್ದೆ, ಅವನಿಗೆ ಯಾವ ಗುಂಪಿನ ರಕ್ತ ಬೇಕಿತ್ತೋ, ನನ್ನದು ಹೊಂದುವುದಿಲ್ಲವೋ ಏನೋ' ಎಂದು ಇವಳ ಕಣ್ಣು ಆ ಹುಡುಗನನ್ನು ಹುಡುಕಿತು. 'ಎಲ್ಲಿ ಹೋದ ನನ್ನ ಮಗನಂತೆ ಕಂಡವನು, ನನ್ನ ಕಣ್ಣಿಗೆ ಬೇಗ ದಕ್ಕಬಾರದೇ' ಎಂದು ತಪಿಸಿದಳು.

ಸ್ವಲ್ಪ ಹೊತ್ತು ಕಾದಳು. ಓಟಿಯ ಬಾಗಿಲು ತೆಗೆಯುವ ಯಾವುದೇ ಲಕ್ಷಣಗಳು ಕಾಣದೆ ಸೀದಾ ಓಪಿಡಿಯ ಬಳಿ ಹೋದಳು. 'ನೆನ್ನೆ ಒಬ್ಬರಿಗೆ ಕಿಡ್ನಿ ಟ್ರಾನ್ಸಪ್ಲಾಂಟ್ ನಡಿತ್ತಿತ್ತಲ್ಲ, ಹೇಗಿದ್ದಾರೆ' ಎಂದು ಕೇಳಿದಳು. 'ಅವರು ಸರಿಹೋದರು' ಎಂದಳು ಓಪಿಡಿಯ ಹುಡುಗಿ. ಒಂದು ಕ್ಷಣ ದಿಕ್ಕೆಟ್ಟ ಸೂತಕ. ಇವಳ ಮುಖ ಬಾಡಿತು. ಕಪ್ಪು ಛಾಯೆ ಆವರಿಸಿತು. ಆಸ್ಪತ್ರೆಯನ್ನು ಒಮ್ಮೆ ನೋಡಿದಳು. ಒಂದು ಶವಗಾರದ ಕೇಂದ್ರದಂತೆ ಕಂಡಿತು. ಇವಳ ಕಣ್ಣಿನಲ್ಲಿ ಮೂಡಿದ ಒಂದು ಭಾರವಾದ ಹನಿ ಘನವಾಯಿತು. ಭಾರವಾದ ಹೆಜ್ಜೆಗಳನ್ನಿಟ್ಟು ಹೊರಟಳು. 'ಅಮ್ಮ ಒಂದು ನಿಮಿಷ, ನಿಮಗೆ ಅವರ ಮಗ ಕೊಡಲು ಇದನ್ನು ಹೇಳಿದ್ದಾರೆ' ಎಂದು ದೊಡ್ಡ ಬಾಕ್ಸನ್ನು ಕೊಟ್ಟಳು.

'ಏನೇ ಆದರೂ ಆ ಹುಡುಗನನ್ನು ಒಮ್ಮೆ ನೋಡಬೇಕಿತ್ತು, ಗಟ್ಟಿಯಾಗಿ ತಬ್ಬಿಕೊಳ್ಳಬೇಕಿತ್ತು' ಎಂದು ಇವಳು ಮೆಲ್ಲಗೆ ನಡೆಯುತ್ತಾ ಬಂದಳು. ಎಲೆಕ್ಟ್ರಿಕ್ ಕಂಬದ ಮೇಲೆ ಇಪ್ಪತ್ತೆರೆಡು ಪಾರಿವಾಳು ಹಾಗೆಯೇ ತೂಗುತ್ತಾ ಕೂತಿದ್ದವು. ಬಸ್ಸು ಹತ್ತಿ ಮನೆಗೆ ಬಂದಳು. ಬಾಕ್ಸು ತೆಗೆದು ನೋಡಿದಳು.

ಒಂದು ಮಿರರ್ ಫಿನಿಷಿನ, ಆರಾಮಾಗಿ ಮುಚ್ಚಳ ತೆಗೆಯುವ, ತ್ರಾಸಿಲ್ಲದೆ ಮೂರು ಲೀಟರಿನಷ್ಟು ಚಹಾ ಸುರಿಯುವ, ಹಗುರವಾದ ನೂತನ ಥರ್ಮಾ ಫ್ಲಾಸ್ಕು ಕಂಡಿತು. ಒಮ್ಮೆ ಇದನ್ನು ಎದೆಗೆ ಒತ್ತಿಕೊಂಡು ಗಟ್ಟಿಯಾಗಿ ತಬ್ಬಿಕೊಂಡಳು. ಆ ಬಿಗಿಯಾದ ಅಪ್ಪುಗೆಯಲ್ಲಿ ಮೂಲಂಗಿ ಹುಡುಗನ ನೆರಳಿತ್ತು. ಇವಳಿಗೆ ಅವನನ್ನೆ ತಬ್ಬಿಕೊಂಡ ಹಾಗೆ ಅನ್ನಿಸಿತು. ಬೆಚ್ಚಗಿನ ಭಾವದಲ್ಲಿ ಅತ್ತಳು. ಹೊಸತಾದ ಥರ್ಮಾ ಫ್ಲಾಸ್ಕಿನಲ್ಲಿ ಚಂದದ ದೊಡ್ಡದಾದ ಸ್ಟಿಕ್ಕರಿತ್ತು. ಅದನ್ನೆ ನವಿರಾಗಿ ಮುಟ್ಟುತ್ತಾ ಚೂಪಾಗಿ ದಿಟ್ಟಿಸಿದಳು.

●